

ಒಂದು ಮಗು ಬಾವಿಗೆ ಬಿದ್ದು ನೀರು ಕುಡಿಯುತ್ತಿರುವಾಗ, ಮಗುವಿನ ತಾಯಿ "ಈಜಲು ಬರುವವರು ಯಾರಾದರೂ ಇದ್ದರೆ ದಯವಿಟ್ಟು ಹಾರಿ" ಎಂದು ಅರಚುತ್ತಾ ಅಳುತ್ತಿದ್ದಳು. ಬಾವಿ ತುಂಬಾ ಆಳವಾಗಿದ್ದರಿಂದ ಯಾರೂ ಧೈರ್ಯ ಮಾಡಿ ಮುಂದೆ ಬರಲಿಲ್ಲ.

ಕೊನೆಗೆ ಊರಿನ ಗೌಡರು (ಪ್ರಮುಖರು), "ಯಾರಾದರೂ ಬಾವಿಗೆ ಹಾರಿ ಮಗುವನ್ನು ಉಳಿಸಿದರೆ ಅವರಿಗೆ ಒಂದು ಲಕ್ಷ ರೂಪಾಯಿ ಬಹುಮಾನ ನೀಡುತ್ತೇನೆ" ಎಂದು ಘೋಷಿಸಿದರು. ಕೂಡಲೇ ನಡುಹರೆಯದ ಒಬ್ಬ ವ್ಯಕ್ತಿ ಥಟ್ಟನೆ ಬಾವಿಗೆ ಹಾರಿ, ಮಗುವನ್ನು ಮೇಲೆ ಎಳೆದುಕೊಂಡು ಬಂದರು. ಎಲ್ಲರೂ ಆ ವ್ಯಕ್ತಿಯ ಧೈರ್ಯವನ್ನು ಮೆಚ್ಚಿ ಕೊಂಡಾಡಿದರು.

ಯುವಕರೆಲ್ಲಾ ಅವರ ಬಳಿ ಬಂದು, "ನೀವೇ ಅಸಲಿ ಶೂರರು ಸ್ವಾಮಿ, ಎಂತಹ ಗಟ್ಟಿ ಗುಂಡಿಗೆ ನಿಮ್ಮದು!" ಎಂದರು.

ಆದರೆ ಆ ವ್ಯಕ್ತಿ ಕೋಪದಿಂದ, "ಅದೆಲ್ಲಾ ಇರಲಿ, ನನ್ನನ್ನು ಹಿಂದಿನಿಂದ ದಬ್ಬಿದವನು ಯಾರು?" ಎಂದು ಕೇಳಿದರು. ಯಾರೂ ಮಾತಾಡಲಿಲ್ಲ. ಆಗ ಆ ವ್ಯಕ್ತಿಯ ಹೆಂಡತಿ ಮುಂದೆ ಬಂದು ಹೇಳಿದಳು:

"ನಿಮ್ಮನ್ನು ತಳ್ಳಿದ್ದು ನಾನೇ!"

ಗಂಡನಿಗೆ ಆಶ್ಚರ್ಯವಾಗಿ, "ನೀನು ಯಾಕೆ ಹೀಗೆ ಮಾಡಿದೆ?" ಎಂದು ಕೇಳಿದನು.

ಅದಕ್ಕೆ ಅವಳು ಹೇಳಿದಳು: "ಅವರು ಒಂದು ಲಕ್ಷ ಕೊಡುತ್ತೇನೆ ಎಂದು ಹೇಳಿದರಲ್ಲವೇ? ಒಂದು ವೇಳೆ ನೀವು ಮಗುವನ್ನು ಮೇಲೆ ತಂದರೆ ಗೌಡರು ಒಂದು ಲಕ್ಷ ಕೊಡುತ್ತಾರೆ. ಇಲ್ಲದಿದ್ದರೆ, ನೀವು ನೀರಿನಲ್ಲಿ ಮುಳುಗಿ ಸತ್ತರೆ ಇನ್ಶೂರೆನ್ಸ್ ಕಂಪನಿಯವರು ಒಂದು ಲಕ್ಷ ಕೊಡುತ್ತಾರೆ. ಹೀಗೆ ಸತ್ತರೂ ಒಂದು ಲಕ್ಷ, ಬದುಕಿದರೂ ಒಂದು ಲಕ್ಷ! ಇಂತಹ ಸೌಭಾಗ್ಯ ಮತ್ತೆ ಸಿಗುವುದಿಲ್ಲ ಎಂದು ನಿಮ್ಮನ್ನು ತಳ್ಳಿಬಿಟ್ಟೆ!"

ನೀತಿ: ಯಾರು ಸತ್ತರೂ ಸರಿ, ಯಾರು ಬದುಕಿದರೂ ಸರಿ, ನಮಗೆ ಲಾಭವಾಗಬೇಕು ಎಂದು ಯೋಚಿಸುವವರು ನಮ್ಮ ಸುತ್ತಮುತ್ತಲೇ ಇರುತ್ತಾರೆ!